ರಾಜ್ಯ ಸಾರಿಗೆ ಸಂಸ್ಥೆಯ ಬಸ್ ಪ್ರಯಾಣ ದರದ ಮೇಲೆ ಶೇಕಡ 10 ರಷ್ಟು ಕೊಲ್ಲಿ ಸರ್ಚಾರ್ಜ್ ವಿಧಿಸುವ ಬಗ್ಗೆ

(314) - ಶ್ರೀ ಗುರುಪಾದಪ್ಪ ನಾಗ್ಮಾರಪಲ್ಲಿ (ಔರಾದ್): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ ಪ್ರಯಾಣ ದರದ ಮೇಲೆ ಶೇ. 10ರಷ್ಟು ಕೊಲ್ಲಿ ಸರ್ಚಾರ್ಜ್ ವಿಧಿಸುವ ವಿಚಾರ ಸರ್ಕಾರದ ಮುಂದಿದೆಯೇ?

ಆ) ರಾಜ್ಯದಲ್ಲಿ ಈಗಾಗಲೇ ಆಟೋ. ಟ್ಯಾಕ್ಸಿ, ವಿದ್ಯುತ್ ಮತ್ತು ಹಾಲಿನ ದರಗಳ ಹೆಚ್ಚಳದಿಂದಾಗಿ ಶ್ರೀಸಾಮಾನ್ಯನು ತತ್ತರುಸುತ್ತಿರುವುದರಿಂದ ಸರ್ಕಾರವು ರಸ್ತೆ ಸಾರಿಗೆ ಸಂಸ್ಥೆಯ ಬಸ್ ಪ್ರಯಾಣದ ಮೇಲೆ ವಿಧಿಸಲಿರುವ ಕೊಲ್ಲಿ ಸರ್ಚಾರ್ಜ್ ಬಗ್ಗೆ ಪುನರ್ ಪರಿಶೀಲಿಸುತ್ತದೆಯೇ?

ಶ್ರೀ ಅಜೀಜ್ ಸೇಠ್ (ಸಾರಿಗೆ ಸಚಿವರು)

ಅ) ಹೌದು

ಆ) ಇಂದನ ಮತ್ತು ಇಂದನ ಸಾಮಗ್ರಿಗಳು ಮೇಲೆ ಕೊಲ್ಲಿ ಸರ್ಚಾರ್ಜಿನಿಂದಾಗಿ ಎಲ್ಲಾ ಆಯವ್ಯಯ ವೆಚ್ಚವು ಹೆಚ್ಚಾಗಿರುತ್ತದೆ.

ಅಂತಿಮ ತೀರ್ಮಾನವನ್ನು ಇನ್ನೂ ಕೈಗೊಂಡಿಲ್ಲ.

ವೃತ್ತಿ ಶಿಕ್ಷಣ ತರಬೇತಿ ಪಡೆಯುತ್ತಿರುವ ವಿದ್ಯಾರ್ಥಿಗಳ ಬಸ್‌ಪಾಸ್ ಅನುಕೂಲವಿಲ್ಲದಿರುವ ಬಗ್ಗೆ

(315) - ಶ್ರೀ ಗುರುಪಾದಪ್ಪ ನಾಗ್ಮಾರಪಲ್ಲಿ (ಔರಾದ್) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಬಸ್‌ಪಾಸ್‌ಸೌಲಭ್ಯ ಪಡೆಯುತ್ತಿರುವ ಶಾಲಾ ಹಾಗೂ ಕಾಲೇಜು ವಿದ್ಯಾರ್ಥಿಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ಅಂಕಿ ಅಂಶಗಳನ್ನು ನೀಡುವುದು)

ಆ) ಇದರಿಂದ ರಾಜ್ಯ ಸಾರಿಗೆ ಸಂಸ್ಥೆಗೆ ಪ್ರತಿವರ್ಷ ಎಷ್ಟು ಹೊರೆಯಾಗುತ್ತಿದೆ?

ಇ) ರಾಜ್ಯದ ವಿವಿಧ ಶಿಕ್ಷಣ ಸಂಸ್ಥೆಗಳಲ್ಲಿ ವೃತ್ತಿ ಶಿಕ್ಷಣ (ವೋಕೆಷನಲ್ ಟ್ರೈನಿಂಗ್ ಪಡೆಯುತ್ತಿರುವ ವಿದ್ಯಾರ್ಥಿಗಳಿಗೆ ಬಸ್ ಪಾಸ್ ಸೌಲಭ್ಯಗಳಿವೆಯೇ?

ಈ) ಇಲ್ಲದಿದ್ದಲ್ಲಿ ವೃತ್ತಿ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳು ಯಾವುದೇ ಸ್ಟೈಫಂಡ್ ಪಡೆಯುವುದಿಲ್ಲವಾದ ಕಾರಣ ಈ ವಿದ್ಯಾರ್ಥಿಗಳಿಗೂ ಬಸ್‌ಪಾಸ್ ಸೌಲಭ್ಯಗಳನ್ನು ವಿಸ್ತರಿಸಲು ಸರ್ಕಾರ ಸೂಕ್ತ ಕ್ರಮ ಕೈಗೊಳ್ಳುತ್ತದೆಯೇ?

ಉ) ಹಾಲೀ ನೀಡುತ್ತಿರುವ ಬಸ್ ಪಾಸ್‌ಗಳನ್ನು ವಿದ್ಯಾರ್ಥಿಗಳ ವಯೋಮಿತಿಗಳನ್ನು ಯೋಚಿಸದೆಯೇ ಎಲ್ಲಾ ವಿದ್ಯಾರ್ಥಿಗಳಿಗೂ ಸೌಲಭ್ಯ ನೀಡಲು ಸರ್ಕಾರದವರು ಕ್ರಮ ಕೈಗೊಳ್ಳುವರೇ.

ಶ್ರೀ ಅಜೀಜ್ ಸೇಠ್ (ಸಾರಿಗೆ ಸಚಿವರು):

ಅ) 7,80,158 (ಸಾರಿಗೆ ಸಂಸ್ಥೆಯಲ್ಲಿ ವಿಭಾಗವಾರು ವ್ಯವಸ್ಥೆ ಇರುವುದರಿಂದ ವಿಭಾಗವಾರು ಅಂಕಿ ಸಂಖ್ಯೆಯನ್ನು ಕೊಡಲಾಗಿದೆ.

1) ಬೆಂಗಳೂರು ನಗರ	258463
2) ಬೆಂಗಳೂರು ಗ್ರಾಮಾಂತರ ವಿಭಾಗ	65511
3) ಬೆಳಗಾಂ	63 375
4) ಬಿಜಾಪುರ	37 040